ದೇವದಾಸಿಯರ ಸೌಲಭ್ಯ

ಶ್ರೀ. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ದೇವದಾಸಿಯರ ಸಂಖ್ಯೆ ಎಷ್ಟೆಂದು ಗುರುತಿಸಲಾಗಿದೆ.

ಆ) ರಾಜ್ಯದಲ್ಲಿ ಅವರು ಯಾವ ಯಾವ ತಾಲ್ಲೂಕಿನಲ್ಲಿದ್ದಾರೆ.

ಇ) ರಾಜ್ಯದಲ್ಲಿ ದೇವದಾಸಿಯರಿಗೆ ಉತ್ತಮ ಸಾಂಸಾರಿಕ ಜೀವನ ಸಾಗಿಸಲು ಏನಾದರೂ ನೆರವು ನೀಡುವ ಯೋಜನೆ ಇದೆಯೇ ?

ಈ) ಹಾಗಿದ್ದಲ್ಲಿ ಅವರಿಗೆ ಈ ತನಕ ಖರ್ಚಾದ ಹಣವೆಷ್ಟು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೮೮೭೦.

ಆ) ವಿವರವಾದ ಮಾಹಿತಿಯನ್ನು ಅನುಬಂಧ ೧ ರಲ್ಲಿ ಲಗತ್ತಿಸಲಾಗಿದೆ,

ಇ) ಇದೆ.

೧. ದೇವದಾಸಿಯರ ಮಕ್ಕಳಿಗಾಗಿ ಹೆಣ್ಣು ಮಕ್ಕಳ ಪ್ರಾಮಾಣಿತ ಶಾಲೆಯನ್ನು ಸೌಂದತ್ತಿಯಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿ ಅವರಿಗೆ ಊಟ ಮತ್ತು ವಸತಿ ಸೌಕರ್ಯ ಕಲ್ಪಿಸಲಾಗಿದೆ. ಅಲ್ಲದೇ ಅಥಣಿಯಲ್ಲಿ ರಾಜ್ಯ ನಿಲಯವನ್ನು ಇವರಿಗಾಗಿ ಪ್ರಾರಂಭಿಸಲಾಗಿದೆ. ಇಲ್ಲಿ ದೇವದಾಸಿ ಮಹಿಳೆಯರಿಗೆ ವಸತಿ ಸೌಕರ್ಯದೊಂದಿಗೆ ಕೆಲವು ತರಬೇತಿಗಳನ್ನು ಕೊಟ್ಟು ತಮ್ಮ ಮುಂದಿನ ಜೀವನವನ್ನು ಸುಗುಮಪಡಿಸಿಕೊಳ್ಳಲು ಸಹಕರಿಸಲಾಗಿದೆ.

೨. ದೇವದಾಸಿ ಮಹಿಳೆಯರು ತಮ್ಮ ಆರ್ಥಿಕ ಜೀವನವನ್ನು ಬಲಪಡಿಸಿಕೊಳ್ಳಲು ಇಲಾಖೆಯ ಮತ್ತು ಸರ್ಕಾರದ ಇತರ ಯೋಜನೆಗಳಾದ ಗೃಹ ಕಲ್ಯಾಣ ಬಿಪಿಎಲ್ ಇತ್ಯಾದಿಗಳ ಮೂಲಕ ಸಹಾಯಧನ ನೀಡಲಾಗುತ್ತಿದೆ.

೩. ದೇವದಾಸಿ ಮಹಿಳೆಯರಿಗಾಗಿ ೪ ತರಬೇತಿ ಕೇಂದ್ರಗಳನ್ನು ಮನೋಲಿ, ಕಟಕೋಳ್, ಯಾಡವಾಡ ಮತ್ತು ಕಾಜಲಗಿಗಳಿಗೆ ಪ್ರಾರಂಭಿಸಲಾಗಿದೆ. ಇಲ್ಲಿ ೧೦೪ ದೇವದಾಸಿ ಮಹಿಳೆಯರಿಗೆ ಹೊಲಿಗೆ, ಮೇಣದ ಬತ್ತಿ ತಯಾರಿಕೆ, ಅಗರಬತ್ತಿ ತಯಾರಿಕೆ ಮತ್ತು ಬಟ್ಟೆ ಸಾಬೂನು ತಯಾರಿಸುವ ತರಬೇತಿಯನ್ನು ಕೊಡಲಾಗುತ್ತಿದೆ.

೪. ಮನೋಲಿಯಲ್ಲಿ ವಿವಿದ್ದೋದ್ದೇಶ ಸಹಕಾರ ಸಂಘವನ್ನು ಸ್ಥಾಪಿಸಿ ನೋಂದಣಿ ಮಾಡಲಾಗಿದೆ.

೫. ದೇವದಾಸಿ ಮದುವೆಯನ್ನು ಉತ್ತೇಜಿಸುವ ಸಲುವಾಗಿ ದೇವದಾಸಿಯರನ್ನು ಮದುವೆಯಾದರೆ ಮದುವೆಯಾದ ದಂಪತಿಗಳಿಗೆ ೩೦೦೦-೮೦ ರೂ.ಗಳ ಧನ ಸಹಾಯವನ್ನು ಕೊಡಲಾಗುತ್ತಿದೆ ಈ ರೀತಿ ಇದುವರೆವಿಗೂ ೨೦೬ ದಂಪತಿಗಳಿಗೆ ಸಹಾಯ ಧನ ಕೊಡಲಾಗಿದೆ.

೬. ದೇವದಾಸಿಯ ಪಿಡುಗು ನಿರ್ಮೂಲನ ಮಾಡುವ ವಿಚಾರವಾಗಿ ಜಿಲ್ಲಾ ಮಟ್ಟದ ಸಂಕೀರ್ಣಗಳನ್ನು ಬೀದರ್, ಗುಲ್ಬರ್ಗಾ, ಶಿವಮೊಗ್ಗ, ಬಳ್ಳಾರಿ ಮತ್ತು ರಾಯಚೂರುಗಳಲ್ಲಿ ನಡೆಸಲಾಗಿದೆ.

೭. ಈ ಪದ್ಧತಿಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಪ್ರಚಾರ ಮಾಧ್ಯಮಗಳಾದ ಕರಪತ್ರಗಳು, ಭಿತ್ತಿ ಪತ್ರ, ರೇಡಿಯೋ, ದೂರದರ್ಶನಗಳು ಮೂಲಕ ತಿಳಿಯ ಪಡಿಸಲಾಗುತ್ತಿದೆ.

ಈ) ಈ ಕಾರ್ಯಕ್ರಮಗಳಿಗೆ ರೂ. ೩೦.೧೪ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಅನುಬಂಧ—೧

ಕೆಳಕಂಡ ಸ್ಥಳಗಳಲ್ಲಿ ೧೯೮೩-೮೪ನೇ ಸಾಲಿನಲ್ಲಿ ನಡೆಸಿದ ಸರ್ವೆಯ ಪ್ರಕಾರ

ದೇವದಾಸಿಯೆಂದು ಗುರುತಿಸಲ್ಪಟ್ಟವರ ಸಂಖ್ಯೆಗಳ ಪಟ್ಟಿ

೧.	ಬಳ್ಳಾರಿ ಜಿಲ್ಲೆ :		
	೧. ಸಂಡೂರು	...	೧೦೦
	೨. ಕೂಡ್ಲಗಿ	..	೬೪೭
	೩. ಹರಪನಹಳ್ಳಿ	...	೨೫೫
	೪. ಹಡಗಲಿ	...	೪೨
			೨೮
	೫. ಸಿರಗುಪ್ಪ	...	೯೩
	೬. ಹಗರಿ ಬೊಮ್ಮನಹಳ್ಳಿ		
			೧೫೦೯
೨.	ಬೀದರ್ ಜಿಲ್ಲೆ :		
	೧. ಬೀದರ್ ತಾಲ್ಲೂಕು	...	೯
	೨. ಹುಮ್ನಾಬಾದ್	...	೯
	೩. ಬಸವನ ಬಾಗೇವಾಡಿ	...	೧೨
			೩೦
೩.	ಧಾರವಾಡ ಜಿಲ್ಲೆ ;		
	೧. ಹಿರೇಕೆರೂರು	...	೫೮
	೨. ಹಾವೇರಿ	...	೧೧೮
	೩. ಸವಣೂರು	...	೧೭೦
	೪. ರೋಣ	...	೯೦೫
	೫. ನವಲಗುಂದ	...	೧೩೦
	೬. ಹಾನಗಲ್	...	೧೬
	೭. ಧಾರವಾಡ್	...	೨೬
	೮. ಮುಂಡರಗಿ	...	೫೦
	೯. ಗದಗ್	...	೨೨೮
	೧೦. ಬ್ಯಾಡಗಿ	...	೨೭
			೧೭೨೮

೪. ಗುಲ್ಬರ್ಗ ಜಿಲ್ಲೆ :

೧. ಜೇವರ್ಗಿ	...	೩೨
೨. ಅಫ್‌ಜಲ್‌ಪುರ	...	೫೨
೩. ಆಳಂದ	...	೭೦
೪. ಚಿತ್ತಾಪುರ	...	೩೦
೫. ಚಿಂಚೋಳಿ	...	೨೦
೬. ಶೋರಾಪುರ	...	೨೮೩
೭. ಯಾದಗಿರಿ	...	೨೨
		೫೦೯

೫. ಬೆಳಗಾವಿ ಜಿಲ್ಲೆ

೧. ಅಥಣಿ	...	೭೪೪
೨. ಹುಕ್ಕೇರಿ	...	೫೪೯
೩. ರಾಯಬಾಗ್	...	೫೩೨
೪. ಚಿಕ್ಕೋಡಿ	...	೪೯೯
೫. ಗೋಕಾಕ್	...	೩೫೦
೬. ರಾಮದುರ್ಗ	...	೩೨೦
೭. ಸವದತ್ತಿ	...	೧೫೨
೮. ಬೈಲಹೊಂಗಲ	...	೭೦
೯. ಖಾನಾಪುರ	...	೨೯
೧೦. ಬೆಳಗಾಂ	...	೨೧
		೩೨೬೭

೬. ರಾಯಚೂರು ಜಿಲ್ಲೆ ;

೧. ಯಲ್ಬುರ್ಗ	...	೨೮೨
೨. ಕುಷ್ಟಗಿ	...	೧೫೧೦
ಲಿಂಗಸಂಗೂರು ತಾಲ್ಲೂಕು	...	೩೬
೧. ಮುದಗೋಲ್	...	೫೧
೨. ಮಾನ್ವಿ	...	೬೪
೩. ಕಂಡಗಾಲ್	...	೩೨
		೬೧೫

೭. ಬಿಜಾಪುರ ಜಿಲ್ಲೆ ;

೧. ಬಾದಾಮಿ	...	೪೫೨
೨. ಜಮಖಂಡಿ	...	೭೧೦
೩. ಮುದೋಳ್	...	೫೧
		೧೨೧೩

ಒಟ್ಟು ; ೪೪೭೦.

ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಕುರಿತು

೭೪೬. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ ತಾಲ್ಲೂಕಿನಲ್ಲಿ ಮಜರೆ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರಿ ಆದೇಶ ಯಾವಾಗ ಹೊರಡಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಗೋಕಾಕ್ ತಾಲ್ಲೂಕಿನಲ್ಲಿರುವ ಮಜುರೆ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಯಾದಗಿರಿ ತಾಲ್ಲೂಕಿನ ಭೂ ನ್ಯಾಯ ಮಂಡಳಿ ಬಗ್ಗೆ

೭೫೪. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಾದಗಿರಿ ತಾಲ್ಲೂಕು ಭೂ ನ್ಯಾಯ ಮಂಡಳಿಯಲ್ಲಿ ೧೯೫೫-೫೬, ೧೯೫೬-೫೭, ಮತ್ತು ೧೯೫೭-೫೮ನೇ ಸಾಲಿನಲ್ಲಿ ಇತ್ಯರ್ಥವಾದ ಒಟ್ಟು ಪ್ರಕರಣಗಳೆಷ್ಟು ?

ಆ) ಗೇಣಿದಾರರ ಪರವಾಗಿ ಮತ್ತು ವಿರುದ್ಧವಾಗಿ ತೀರ್ಮಾನವಾದ ಪ್ರಕರಣಗಳೆಷ್ಟು ?

ಇ) ಯಾದಗಿರಿ ತಾಲ್ಲೂಕಿನಲ್ಲಿ ಸ್ವಾಧೀನಕ್ಕೆ ತೆಗೆದುಕೊಂಡ ಹೆಚ್ಚುವರಿ ಭೂಮಿ ಮತ್ತು ಭೂ ರಹಿತರಿಗೆ ಹಂಚಲಾದ ವಿಸ್ತೀರ್ಣವೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ)

೧೯೫೫-೫೬	೧೯೫೬-೫೭	೧೯೫೭-೫೮
೧೧೨	೯೯	೮೦